**<u>1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,</u>**

**<u>ಅಸಲು ದಾವೆ. ಸಂಖ್ಯೆ: 515/2023</u>**

ಪಿ.ಡಬ್ಲೂಃ02 ಶ್ರೀ ಎಸ್ ಪಿ ಮನಮೋಹನ್

**ಸಾಕ್ಷಿಯನ್ನು ದಿನಾಂಕಃ 21-01-2026 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**<u>ಪಾಟೀಸವಾಲು ಃ ಪ್ರತಿವಾದಿಯ ಪರ ಶ್ರೀ.ಎಂ ಎಂ ವಕೀಲರಿಂದ</u>**

**1.** ನಾನು ಸುಮಾರು 3 ವರ್ಷಗಳಿಂದ ನ್ಯಾಯಾಲಯಕ್ಕೆ ಬರುತ್ತಿದ್ದ ನನ್ನ ಮಗನ ಒಂದು ಕೇಸು ನ್ಯಾಯಾಲಯದಲ್ಲಿ ಇರುತ್ತದೆ. ನನಗೆ ತುಂಬಾ ಕೇಸುಗಳು ಕೆಜಿಎಫ್ ನ್ಯಾಯಾಲಯದಲ್ಲಿ ಇದ್ದು ನಾನು ಸುಮಾರು 20 ವರ್ಷಗಳಿಂದ ನ್ಯಾಯಾಲಯಕ್ಕೆ ಬಂದು ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಿನ ವಾದಿಯವರ ಮಗನಾದ ಜಯಚಂದ್ರನ್ ಜೊತೆ ಇದ್ದು ನಾನಾಗಿ ನ್ಯಾಯಾಲಯಕ್ಕೆ ಬಂದಿರುತ್ತೇನೆ. ವಾದಿಯವರ ಮಗ ನನಗೆ ನ್ಯಾಯಾಲಯದಲ್ಲಿ ಏನು ಹೇಳಬೇಕು ಎಂದು ಹೇಳಿಕೊಟ್ಟಿರುತ್ತಾರೆ ಎಂದರೆ ಇಲ್ಲ. ನನಗೆ ವಾದಿಯವರು 1974 ನೇ ಸಾಲಿನಿಂದ ಗೊತ್ತಿರುತ್ತದೆ. ನಾನು 1974 ನೇ ಸಾಲಿನಲ್ಲಿ ಅಂಚೆ ಕಛೇರಿಯಲ್ಲಿ ಪೋಸ್ಟ್‌ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದೆನು.

**2.** ನನಗೆ ಪ್ರತಿವಾದಿಯನ್ನು 1980 ನೇ ಸಾಲಿನಿಂದ ಗೊತ್ತಿರುತ್ತದೆ. ಈ ದಾವೆಯ ಪ್ರತಿವಾದಿಯು ಮೊದಲು ವಾದಿಯ ವಿರುದ್ಧ ದಾವಾ ಆಸ್ತಿಯು ಅವರಿಗೆ ಸೇರಿದ್ದು ಎಂದು ಹೂಡಿರುತ್ತಾರೆ. ಸದರಿ ಪ್ರತಿವಾದಿಯು ಹೂಡಿದ ದಾವೆಯು ನಡೀತಾ ಇತ್ತು. ಸದರಿ ಪ್ರತಿವಾದಿಯು ವಾದಿಯವರ ಮಗನಾದ ಜಯಚಂದ್ರ ರವರ ವಿರುದ್ಧ ಹೂಡಿದ ದಾವೆಯು ಪ್ರತಿವಾದಿಯ ಪರವಾಗಿ ನ್ಯಾಯಾಲಯದಿಂದ ಆದೇಶ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಅವರ ಪ್ರಮಾಣಪತ್ರವನ್ನು ತೋರಿಸಲಾಗಿ ಅದರಲ್ಲಿ ಬರೆದ ಅಂಶಗಳ ಬಗ್ಗೆ ಗೊತ್ತಿದೆಯಾ ಎಂದರೆ ಗೊತ್ತಿರುತ್ತದೆ. ಸುಮಾರು 10 ವರ್ಷಗಳ ಹಿಂದೆ ನಾನು ವಾದಿ ಮತ್ತು ಪ್ರತಿವಾದಿಯ ನಡುವೆ ಇರುವ ಮನಸ್ತಾಪಕ್ಕೆ ಸಂಬಂದ ಪಟ್ಟಂತೆ ಪೋಲೀಸ್ ಠಾಣೆಗೆ ಹೋಗಿರುತ್ತೇನೆ.

**3.** ಸದರಿ ದಾವಾ ಆಸ್ತಿಯು ನನ್ನ ಪ್ರಕಾರ ವಾದಿಯವರಿಗೆ 1974 ನೇ ಸಾಲಿನಲ್ಲಿ ಅಲಾಟ್ ಆಗಿರುತ್ತದೆ. ಸದರಿ ದಾವಾ ಆಸ್ತಿಯ ಮನೆಯ ಸಂಖ್ಯೆ 27 ಆಗಿರುತ್ತದೆ. ವಾದಿಯವರಿಗೆ ಒಂದೇ ಮನೆ ಇರುತ್ತದೆ. ಹಾಗಾದರೆ ನನ್ನ ಪ್ರಕಾರ ವಾದಿಯವರಿಗೆ ಬೇರೆ ಮನೆ ಇಲ್ಲ ಎಂದರೆ ಇಲ್ಲ. ಸದರಿ ದಾವಾ ಆಸ್ತಿ ಆದ ಮನೆ ಸಂಖ್ಯೆ 27 ರಲ್ಲಿ ಪ್ರತಿವಾದಿಯು ಸುಮಾರು 10 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ದಾವಾ ಆಸ್ತಿಯ ಮನೆಯ ವಿಸ್ತೀರ್ಣವು 10 x 4 ಅಡಿ ಇರುತ್ತದೆ. ಸದರಿ ಮನೆ ಆಸ್ತಿಯ ಚೆಕ್ಕುಬಂದಿ ಚೆಕ್ಕುಬಂದಿ ನನಗೆ ಗೊತ್ತಿದ್ದು ಪೂರ್ವಕ್ಕೆ ಒಂದು ಮನೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಪ್ರತಿವಾದಿಯು ಹೆಚ್ಚುವರಿಯಾಗಿ ಕಟ್ಟಿರುವ ಜಾಗ, ದಕ್ಷಿಣಕ್ಕೆ ಒಂದು ಮನೆ ಇರುತ್ತದೆ.

**4.** ಸದರಿ ದಾವಾಆಸ್ತಿಯ ಮನೆ ಸಂಖ್ಯೆ27 ನ್ನು ನಾನು ಸುಮಾರು ವರ್ಷಗಳ ಹಿಂದೆ ನೋಡಿರುತ್ತೇನೆ. ನನ್ನ ಪ್ರಕಾರ ವಾದಿಯವರು ದಾವಾ ಆಸ್ತಿಯ ಮನೆಯನ್ನು ಪ್ರತಿವಾದಿಗೆ 1000 ರೂಗಳಿಗೆ ಬಾಡಿಗೆಗೆ ನೀಡಿದ್ದು ಅದಕ್ಕೆ ಪೂರಕವಾಗಿ ಪ್ರತಿವಾದಿಯು 2 ತಿಂಗಳು ಬಾಡಿಗೆ ಕಟ್ಟಿನಂತರ ಕೊಟ್ಟಿರುವುದಿಲ್ಲ. ಸದರಿ ವಾದಿ ಮತ್ತು ಪ್ರತಿವಾದಿಯ ನಡುವೆ ಆಗಿದೆ ಎಂದು ಹೇಳಲಾದ ಬಾಡಿಗೆಗೆ ಕರಾರು ಪತ್ರವನ್ನು ನಾನು ನೋಡಿದ್ದೇನಾ ಎಂದರೆ ಇಲ್ಲ. ನಾನು ಪಕ್ಕದ ಬೀದಿಯಲ್ಲಿ ವಾಸ ಮಾಡುತ್ತಿದ್ದು ಅದು ಕೂಡ ಮೈನಿಂಗ್ ಗೆ ಸೇರಿದ್ದಾಗಿರುತ್ತದೆ.

ಸಾಮಾನ್ಯವಾಗಿ ಮೈನಿಂಗ್ ಮನೆಗಳನ್ನು ಇನ್ನೊಬ್ಬರಿಗೆ ಬಾಡಿಗೆಗೆ ಕೊಡುವ ಅಧಿಕಾರ ಯಾರಿಗೂ ಇಲ್ಲ ಎಂದರೆ ಸರಿ.

**5.** ಸುಮಾರು 12 ವರ್ಷಗಳಿಂದ ವಾದಿಯವರು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾರೆ. ನನ್ನ ಪ್ರಕಾರ ನನ್ನ ಪ್ರಮಾಣ ಪತ್ರದ ಖಂಡಿಕೆ 4 ರಲ್ಲಿ ನಮೂದು ಮಾಡಿದ ಮೌಖಿಕ ಕರಾರಿನ ಬಗ್ಗೆ ನನಗೇನಾದರೂ ಮಾಹಿತಿ ಇದೆಯಾ ಎಂದರೆ ಇಲ್ಲ. ಪ್ರತಿವಾದಿಯು 2 ತಿಂಗಳಿನಲ್ಲಿ ಮನೆ ಬಿಡುತ್ತೇನೆ ಎಂದು ವಾದಿಯವರಿಗೆ ಹೇಳಿ ಮನೆಯನ್ನು ಬಿಡದೇ ವಾದಿಯ ವಿರುದ್ಧ ಪೋಲೀಸರಿಗೆ ದೂರನ್ನು ನೀಡಿರುತ್ತಾರೆ. ಸದರಿ 2 ತಿಂಗಳ ವಿಚಾರವನ್ನು ನನ್ನ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ ನನ್ನ ಪ್ರಕಾರ ಸುಮಾರು 8 ವರ್ಷಗಳ ಹಿಂದೆ ವಾದಿಯವರು ಪ್ರತಿವಾದಿಗೆ ಸದರಿ ದಾವಾ ಆಸ್ತಿ ಮನೆಯನ್ನು ಬಿಡಲು ಹೇಳಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ನಾನು ದಿ॥12.08.2019 ರ ಬಗ್ಗೆ ಏನಾದರೂ ನಮೂದು ಮಾಡಿದ್ದೇನಾ ಮತ್ತು ಬಾಡಿಗೆಯ ಬಗ್ಗೆ ಹಾಗೂ ದಾವಾ ಆಸ್ತಿಯನ್ನು ಖಾಲಿ ಮಾಡುವ ಬಗ್ಗೆ ಏನಾದರೂ ಹೇಳಿದ್ದೇನಾ ಎಂದರೆ ಇಲ್ಲ.

**6.** ನನ್ನ ಪ್ರಕಾರ 2018 ನೇ ಸಾಲಿನಲ್ಲಿ ಪ್ರತಿವಾದಿಯು ವಾದಿಯ ವಿರುದ್ಧ ದೂರನ್ನು ನೀಡಿರುತ್ತಾರೆ. ಸದರಿ ವಿಚಾರದ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ ನನ್ನ ಪ್ರಮಾಣ ಪತ್ರದಲ್ಲಿ ದಿಃ21.08.2019 ರ ದೂರಿನ ಬಗ್ಗೆ ಏನಾದರೂ ನಮೂದು ಮಾಡಿದ್ದೇನಾ ಎಂದರೆ ನೆನಪಿಲ್ಲ. ನನ್ನ ಪ್ರಕಾರ 2019 ನೇ ಸಾಲಿನಲ್ಲಿ ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಬಿಜಿಎಂಎಲ್ ನಲ್ಲಿ ಪಂಚಾಯಿತಿಯನ್ನು ಮಾಡಿರುತ್ತಾರೆ. 2001 ನೇ ಸಾಲಿನಲ್ಲಿ ಬಿಜಿಎಂಎಲ್ ನ ಮೈನಿಂಗ್ ಕೆಲಸ ಬಂದಾಗಿರುತ್ತದೆ ಎಂದರೆ ಗೊತ್ತಿಲ್ಲ. ಆದ ಕಾರಣ 2019 ನೇ ಸಾಲಿನಲ್ಲಿ ಪಂಚಾಯಿತಿಯನ್ನು ಮಾಡುವ ಆಸ್ಪದ ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯು ಪಂಚಾಯಿತಿಯಲ್ಲಿ ಅತ್ತ ಬಗ್ಗೆ ಹಾಗೂ ಬೇಡದ ಪದಗಳನ್ನು ಉಪಯೋಗಿಸಿದ ಬಗ್ಗೆ ಏನಾದರೂ ಹೇಳಿದ್ದೇನಾ ಎಂದರೆ ಇಲ್ಲ.

**7.** ವಾದಿಯವರಿಗೆ ಅನಾರೋಗ್ಯ ಆಗಿದ್ದು ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಬಿಜಿಎಂಎಲ್ ರವರು ಮೊದಲು ಒಂದು ಉದ್ಯೋಗಿಗೆ ಒಂದು ಮನೆ ನೀಡುತ್ತಿದ್ದರು ಎಂದರೆ ಸರಿ. ನನಗನೆ ದಾವಾ ಆಸ್ತಿಯ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ಸಹ ವಾದಿ ಮತ್ತು ಅವರ ಮಗನ ಮಾತನ್ನು ಕೇಳಿಕೊಂಡು ಅವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯನ್ನು ಖರೀದಿ ಮಾಡಲು ನಾನೇನಾದರೂ ಪ್ರಯತ್ನಿಸಿದ್ದೇನಾ ಎಂದರೆ ಇಲ್ಲ. ಮೇಲೆ ಹೇಳಿದಂತೆ ಪ್ರತಿವಾದಿಯು ವಾದಿಯವರಿಂದ ದಾವಾಆಸ್ತಿಯನ್ನು 1000 ಮೊತ್ತಕ್ಕೆ ಬಾಡಿಗೆಗೆ ಪಡೆದುಕೊಂಡಿಲ್ಲ ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**